ಇದನ್ನು ಹಕ್ಕುಚ್ಯುತಿ ನಿರ್ಣಯವಾಗಿ ಪರಿಗಣಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಅಧ್ಯಕ್ಷರು: ರಾಜ್ಯದಲ್ಲಿ ವಿಧಾನಸಭಾ ಸದಸ್ಯರ ಕುರಿತು ಶಿಷ್ಟಾಚಾರ ಉಲ್ಲಂಘನೆಯಾಗಿರುವ ಬಗ್ಗೆ ದಿನಾಂಕ 16.03.2011ರ ಬುಧವಾರದಂದು ಮಾನ್ಯ ಮುಖ್ಯಮಂತ್ರಿಯವರು,ಮಾನ್ಯ ಸಭಾಪತಿಯವರು, ವಿಧಾನಪರಿಷತ್ತು, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹಾಗೂ ವಿರೋಧ ಪಕ್ಷದ ನಾಯಕರು ಸೇರಿದಂತೆ ಸಭೆಯನ್ನು ಕರೆದಿರುತ್ತೇನೆ. ಅದರಲ್ಲಿ ಇನ್ನು ಮುಂದೆ ಇಂಥ ಘಟನೆಗಳು ನಡೆಯದಂತೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಈಗ ಮಾನ್ಯ ಸುನಿಲ್ ಹೆಗಡೆಯವರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಸರ್ಕಾರದ ಮುಖ್ಯಕಾರ್ಯದರ್ಶಿಯವರಿಗೆ ಪತ್ರವನ್ನು ಬರೆದು ವರದಿಯನ್ನು ತರಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಬಂಡೆಪ್ಪ ಖಾಶೆಂಪುರ್: ಅಧಿಕಾರಿಗಳಿಗೆ ಚುರುಕು ಮುಟ್ಟಿಸುವ ಸಲುವಾಗ ಆ ಅಧಿಕಾರಿಗಳನ್ನು ತಕ್ಷಣ ಸಸ್ಪೆಂಡ್ ಮಾಡಲು ಆದೇಶ ಮಾಡಿ.

(iii) ವಿಷಯ: ಪಶ್ಚಿಮ ವಾಹಿನಿ ಯೋಜನೆ ಬಗ್ಗೆ.

ಶ್ರೀ ಯು.ಟಿ. ಖಾದರ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ಕಳೆದ ಹಲವಾರು ವರ್ಷಗಳಿಂದ ನೇತ್ರಾವತಿ ನದಿ ತಿರುವಿನ ಬಗ್ಗೆ ಇವತ್ತು ನಮ್ಮ ಜಿಲ್ಲೆಯ ಜನಸಾಮಾನ್ಯರು ವಿರೋಧವನ್ನು ವ್ಯಕ್ತ ಪಡಿಸಿದ್ದರು. ವಿಶ್ವ ತುಳು ಸಮ್ಮೇಳನದಲ್ಲಿ ಸರ್ಕಾರದ ಸಚಿವರು ಬಂದು ಆ ಯೋಜನೆಯನ್ನು ಕೈಗೊಳ್ಳುವುದಿಲ್ಲವೆಂದು ಒಂದು ಮಾತನ್ನು ಕೊಟ್ಟಿದ್ದಾರೆ. ಆದರೆ ಮೊನ್ನೆ ದಿಢೀರನೆ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದರಿಂದ ಅಲ್ಲಿಯ ಜನರು ಕಂಗಾಲಾಗಿದ್ದಾರೆ ಮತ್ತು ಪ್ರತಿಭಟನೆ ಮಾಡಲು ಸಜ್ಜಾಗುತ್ತಿದ್ದಾರೆ. ನೇತ್ರಾವತಿ ನದಿ ತೀರದಲ್ಲಿ ವಾಸಿಸುವ ಜನಸಾಮಾನ್ಯರ ಪರಿಸ್ಥಿತಿಯನ್ನು ಅರಿತುಕೊಳ್ಳದೆಯೇ, ಅವರಿಗೆ ಬೇಕಾದ ನೀರಿನ ವ್ಯವಸ್ಥೆ ಮಾಡದೆಯೇ, ಅಂತರ್ಜಲ ಅಭಿವೃದ್ಧಿಯ ಬಗ್ಗೆ ಸಮೀಕ್ಷೆ ನಡೆಸದೆಯೇ ನೇತ್ರಾವತಿ ತಿರುವು

ಯೋಜನೆಯನ್ನು ಕೈಗೊಳ್ಳಬಾರದು. ಅದಕ್ಕೆ ನಮ್ಮ ಸ್ಪಷ್ಟವಾದ ವಿರೋಧ ಇದೆ. ಮಾನ್ಯ ಸಚಿವರು ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಕಳಕಳಿಯ ವಿನಂತಿ.

ಶ್ರೀ ವಿಶ್ವನಾಥ್: ತಮ್ಮ ಜಿಲ್ಲೆಯವರೇ ಆದ ಮಾನ್ಯ ವೀರಪ್ಪ ಮೊಯಿಲಿಯವರು ಅದನ್ನು ಮಾಡಬೇಕೆಂದು ಹೇಳುತ್ತಾರೆ.

ಶ್ರೀ ಯು.ಟಿ. ಖಾದರ್: ಮಾನ್ಯ ವೀರಪ್ಪಮೊಯಿಲಿಯವರ ಬಗ್ಗೆ ನಮಗೆ ಹೆಮ್ಮೆ ಇದೆ. ಅವರು ಆ ಪ್ರದೇಶದ ಸಂಸದರಾಗಿ ಅಲ್ಲಿಯ ಮತದಾರರಿಗೆ ಕೊಟ್ಟ ಮಾತಿಗೆ ಅನುಗುಣವಾಗಿ ಆ ಧರ್ಮವನ್ನು ಅವರು ಮಾಡುತ್ತಿದ್ದಾರೆ. ನಾವು ನಮ್ಮ ಮತದಾರರು ಏನು ಮಾಡಬೇಕೆಂದು ಹೇಳುತ್ತಾರೋ ಅದರಂತೆ ಪ್ರಶ್ನೆ ಮಾಡುತ್ತಿದ್ದೇವೆ. ಅವರು ಅವರ ಕೆಲಸವನ್ನು ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಚ್.ಸಿ. ಬಾಲಕೃಷ್ಣ : ಇಲ್ಲಿ ಧರ್ಮ ಕರ್ಮದ ಪ್ರಶ್ನೆಯಲ್ಲ. ಒಟ್ಟಿನಲ್ಲಿ ಜನರ ಸಮಸ್ಯೆ ನಿವಾರಣೆಯಾಗಬೇಕು. ಕೇವಲ ಓಟ್ ರಾಜಕೀಯಕ್ಕಾಗಿ ರಾಜಕಾರಣ ಮಾಡುವುದು ಬೇಡ. ಈ ಭಾಗದ ಜನರ ಕಷ್ಟವನ್ನು ದಯಮಾಡಿ ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಕೆಲವೇ ಕ್ಷೇತ್ರಗಳನ್ನು ಪರಿಮಿತಿಯಲ್ಲಿ ಇಟ್ಟುಕೊಂಡು ಇದನ್ನು ಮಾಡುವುದಕ್ಕಾಗುವುದಿಲ್ಲ. ಇಲ್ಲಿ ಬಹಳ ಜನ ಸದಸ್ಯರು 1984ರಿಂದಲೂ ಕೇಳುತ್ತಿದ್ದಾರೆ. ನೀವು ನೀರನ್ನು ತೆಗೆದುಕೊಂಡು ಹೋಗಿ ಸಮುದ್ರಕ್ಕೆ ಕೆಡುವುತಿದ್ದೀರಲ್ಲಾ?

(ಗೊಂದಲ)

ಶ್ರೀ ಯು.ಟಿ. ಖಾದರ್: ನಮ್ಮ ಭಾಗದಲ್ಲಿ ಪಶ್ಚಿಮವಾಹಿನಿ ಯೋಜನೆ ಮಾಡುತ್ತೇವೆ ಮಾಡುತ್ತೇವೆಂದು ಎಲ್ಲರೂ ಮೋಸ ಮಾಡಿದ್ದಾರೆ. ಮೊದಲು ನಮ್ಮ ಸಮಸ್ಯೆಯನ್ನು ಬಗೆಹರಿಸಿ. ಅನಂತರ ನೀವು ಏನಾದರೂ ಮಾಡಿಕೊಳ್ಳಿ.

ಅಧ್ಯಕ್ಷರು: ನಿಮ್ಮ ನಿಮ್ಮಲ್ಲಿ ಏಕೆ ಮಾತನಾಡಿಕೊಳ್ಳುತ್ತೀರಿ?

ಶ್ರೀ ಯು.ಟಿ. ಖಾದರ್: ನಮ್ಮವರಿಗೆ ಮೊದಲು ನೀರು ಕೊಡಿ.

ಶ್ರೀ ಕೆ. ಅಭಯಚಂದ್ರ ಜೈನ್: ನಮ್ಮ ಜನರಿಗೆ ತೊಂದರೆಯಾಗುತ್ತದೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಪಶ್ಚಿಮವಾಹಿನಿಯಲ್ಲಿರುವ ಜಲಸಂಪತ್ತನ್ನು ಬಯಲು ಸೀಮೆಗೆ ಬಳಕೆ ಮಾಡುವ ಉದ್ದೇಶ ನಿನ್ನೆ ಇವತ್ತಿನದ್ದಲ್ಲ. ಬಹಳ ವರ್ಷದ ಚಿಂತನೆ ಇದೆ. ಇದರ ಬಗ್ಗೆ ಹತ್ತು ಹಲವಾರು ಚಿಂತಕರು ವರದಿ ಕೊಟ್ಟಿದ್ದಾರೆ. ಡಾ:ಪರಮಶಿವಯ್ಯನವರೂ ವರದಿ ಕೊಟ್ಟಿದ್ದಾರೆ. ಇಲ್ಲಿ ಎರಡು ಮೂರು ವಿಚಾರಗಳನ್ನು ನಾವು mix ಮಾಡುತ್ತಿದ್ದೇವೆ. ಮಾನ್ಯ ಖಾದರ್‌ರವರು ಎತ್ತಿರುವ ವಿಚಾರ, ಇವತ್ತು ನೀವು ನಮ್ಮ ನೇತ್ರಾವತಿ ನದಿ ಪಶ್ಚಿಮವಾಹಿನಿಯನ್ನು ತಿರುಗಿಸಿ ತೆಗೆದುಕೊಳ್ಳುತ್ತಿದ್ದೀರಿ, ಆದರೆ ಅಲ್ಲೇ ಇವತ್ತು ಬಹಳಷ್ಟು ನೀರಿನ ಸಮಸ್ಯೆ ಇದೆ, ನಮಗೆ "ಸಮುದ್ರದ ನೆಂಟಸ್ಥನವಿದ್ದರೂ ಉಪ್ಪಿಗೆ ಬಡತನ" ಎನ್ನುವ ರೀತಿ 2000 ಟಿಎಂಸಿ ನೀರು ಸಮುದ್ರಕ್ಕೆ ಹರಿದು ಹೋದರೂ ಕೂಡ ಅವರಲ್ಲೇ ಅಲ್ಲಲ್ಲಿ ಕುಡಿಯುವ ನೀರಿನ ದೊಡ್ಡ ಸಮಸ್ಯೆ ಇದೆ. ಅದರ ಬಗ್ಗೆ ನೀವು ಏನು ಕಾರ್ಯಕ್ರಮವನ್ನು ಹಾಕಿದ್ದೀರಿ ಅದನ್ನು ಮೊದಲು ನಮಗೆ ಮಾಡಿಕೊಡಿ. ಅನಂತರ ನೀವು ಮುಂದಿನ ಯೋಜನೆಯನ್ನು ಮಾಡಿ ಎಂಬುದು ಆ ಭಾಗದ ಜನರ ಬಹುದಿನದ ಬೇಡಿಕೆಯಾಗಿದೆ. ಇದು ಒಂದು ಭಾಗ. ಇನ್ನೊಂದು ಭಾಗ, ಅಲ್ಲಿರುವಂಥ environmentalist, ecologists ರವರೆಲ್ಲಾ ಇದನ್ನು ತಿರುವು ಮಾಡಿದರೆ ಅಲ್ಲಿ environmental problem ಆಗುತ್ತದೆ ಎನ್ನುವ ಚಿಂತನೆ ಅವರದ್ದಾಗಿದೆ. ಇನ್ನು ಬಯಲು ಸೀಮೆಯಲ್ಲಿ ನೀರು 1500 ಅಡಿ ಕೆಳಕ್ಕೆ ಹೋಗಿದೆ, ಫ್ಲೋರೆಸಿಸ್ ಆಗಿದೆ, ಅಂಗವಿಕಲರಾಗಿದ್ದಾರೆ, ಜನರು ಊರು ಬಿಟ್ಟಿದ್ದಾರೆ, ಇದು ಕೇವಲ ಬರಗಾಲವಲ್ಲಾ, ಬರಡು ಭೂಮಿಯಾಗುತ್ತಿದೆ ಎನ್ನುವ ಚಿಂತನೆ ಈ ಭಾಗದ್ದವರದ್ದಾಗಿದೆ. ಈ ಮೂರೂ ವಿಚಾರಗಳನ್ನು ನಾವು ಸ್ವಲ್ಪ ಸಮಾಧಾನವಾಗಿ ಬೇರೆ ಬೇರೆ ರೀತಿಯಲ್ಲಿ ತೆಗೆದುಕೊಂಡರೆ ಅವೆಲ್ಲದಕ್ಕೂ

ಪರಿಹಾರವಿದೆ. ಮೊದಲನೆಯದು, ಆ ಭಾಗದಲ್ಲಿ ಇಷ್ಟೊಂದು ನದಿ, ಉಪನದಿಗಳು ಹರಿದರೂ ನಮಗೆ ನೀರಿನ ಯಾವುದೇ ಯೋಜನೆಗಳು ಇಲ್ಲ ಎನ್ನುವುದು ಸರಿಯಾದದ್ದೇ. ಈಗಾಗಲೇ ಕೆ.ಸಿ. ರೆಡ್ಡಿಯವರು ವರದಿಯನ್ನು ಕೊಟ್ಟಿದ್ದಾರೆ. ಅದನ್ನು ಕಾರ್ಯಗತ ಮಾಡಲು ನಾವು ಮುಂದಾಗಿದ್ದೇವೆ. ಅವರು ಏನು ಹೇಳಿದ್ದಾರೆಂದರೆ, ಈ ಭಾಗದಲ್ಲಿ ಯಾವುದೇ ದೊಡ್ಡ ಯೋಜನೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ, ಸಣ್ಣ ಸಣ್ಣ ವೆಂಟೆಡ್ ಡ್ಯಾಂಗಳನ್ನು, ವೇರ್‌ಗಳನ್ನು ಮಾಡಬೇಕೆಂದು ವರದಿಯಲ್ಲಿ ಹೇಳಿದ್ದಾರೆ. ಈಗಾಗಲೇ ಅದನ್ನು ಅನುಷ್ಠಾನ ಮಾಡಲು 2 ಕೋಟಿ ರೂಪಾಯಿ ಕೊಟ್ಟು ಡಿಪಿಆರ್ ಮಾಡಲು ಹೇಳಿದ್ದೇವೆ. ನಮ್ಮ ಇಲಾಖೆಯಿಂದಲೂ ವರದಿ ತಯಾರು ಮಾಡುತ್ತಿದ್ದೇವೆ. ಕರಾವಳಿ ಭಾಗದ ಮೂರೂ ಜಿಲ್ಲೆಗಳ ಬೇಡಿಕೆಯೇನಿದೆ, ಅದನ್ನು ಮೊದಲ ಆದ್ಯತೆಯಲ್ಲಿ ಕ್ರಮ ಖಂಡಿತವಾಗಿ ತೆಗೆದುಕೊಳ್ಳುತ್ತೇವೆ. ಎರಡನೆಯದ್ದು, ನಾವು ತಿರುವು ಮಾಡುವಂಥದ್ದು ಈಗಾಗಲೇ ಎನ್‌ಆರ್‌ಎಸ್‌ಸಿ ಸರ್ವೆಯಾಗಿದೆ. ಡಿಪಿಆರ್ ಮಾಡಲು ಟೆಂಡರ್ ಪ್ರಕಟಣೆ ಮಾಡಿದ್ದೇವೆ. Environmentಗೆ ಹಾನಿ ಆಗುತ್ತದೋ ಇಲ್ಲವೋ ಎಂಬುದು ಡಿಪಿಆರ್ ನಲ್ಲಿ ಸ್ಪಷ್ಟವಾಗುತ್ತದೆ. ನಾವು ಈಗ ತೆಗೆದುಕೊಳ್ಳುವಂಥ ಎತ್ತಿನಹೊಳೆ ಯೋಜನೆಯಲ್ಲಿ ಒಂದು ಇಂಚು ಜಾಗಕೂಡ ಮುಳುಗಡೆಯಾಗುವುದಿಲ್ಲ. ಒಂದೇ ಒಂದು ಗಿಡವನ್ನೂ ಕೂಡ ನಾವು cut ಮಾಡುವುದಿಲ್ಲ. ಒಂದು ರೀತಿಯಿಂದ ಪರಿಸರಕ್ಕೆ ಹಾನಿಯಾಗದಂತೆ ನೇತ್ರಾವತಿ ದಾಟಿ ಕೆಳಗಡೆ ಬಂದ ಮೇಲೆ, ಅಂತಿಮ ಘಟ್ಟದಲ್ಲಿ ನಮ್ಮ ಪಶ್ಚಿಮ ಕರಾವಳಿ ಮತ್ತು ಬಯಲುಸೀಮೆಯ ಮಧ್ಯವರ್ತಿಯಾಗಿರುವಂತಹ ಸಕಲೇಶಪುರದ ಎತ್ತಿನಹೊಳೆಯಲ್ಲಿ ನಾವು ಮಾಡುತ್ತಿದ್ದೇವೆ. ಆದ್ದರಿಂದ ನಿಮ್ಮ concern ಏನಿದೆ, ಆ ಭಾಗಕ್ಕೆ ನೀರು ಕೊಡಬೇಕು, ಆ ಯೋಜನೆಗಳನ್ನು ಮಾಡಬೇಕು, ಖಂಡಿತವಾಗಿಯೂ ಸರ್ಕಾರ ಅದಕ್ಕೆ ಆದ್ಯತೆ ಕೊಡುತ್ತದೆ ಮತ್ತು ಮಾಡುತ್ತದೆ. ಬಹು ದಿನಗಳಿಂದ ಬಯಲುಸೀಮೆಯಲ್ಲಿ ಏನೊಂದು ಬೇಡಿಕೆ ಇದೆಯೋ, ಆ ಯೋಜನೆಯನ್ನೂ ಕೂಡ ನಾವು ಮಾಡುತ್ತೇವೆ. ಮಧ್ಯದಲ್ಲಿ ಪರಿಸರಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ನಾವು

ಬಳಕೆ ಮಾಡಿಕೊಳ್ಳುತ್ತೇವೆ. ಈಗಾಗಲೇ ಬೇಕಾದಷ್ಟು ಹೊಸ ತಂತ್ರಜ್ಞಾನ ಬಂದಿದೆ. ಬೇರೆ ಬೇರೆ ರೀತಿಯಲ್ಲಿ ಆ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ಅದೆಲ್ಲವನ್ನೂ ಕೂಡ, ಯಾವ್ಯಾವ ಸಂದರ್ಭದಲ್ಲಿ ನಾವು ಯಾವ ಕ್ರಮ ತೆಗೆದುಕೊಳ್ಳುತ್ತೇವೆ, ಅದನ್ನು ನಿಮ್ಮ ಭಾಗದ ಶಾಸಕರನ್ನು ಕರೆದು ನಾವು ಮಾತನಾಡುತ್ತೇವೆ, ಈ ಭಾಗದ ಶಾಸಕರನ್ನೂ ಸಹ ಕರೆದು ಮಾತನಾಡುತ್ತೇವೆ ಮತ್ತು ಸದನದಲ್ಲೂ ಕೂಡ ಸ್ಪಷ್ಟವಾದಂತಹ ವಿಚಾರಗಳನ್ನು ಹೇಳುತ್ತೇವೆ. ಕರ್ನಾಟಕ ರಾಜ್ಯದ ಜಲ ಸಂಪತ್ತು ನಮ್ಮೆಲ್ಲರಿಗೂ ಸೇರಿದ್ದು. ಆ ಒಂದು ಜಲ ಸಂಪತ್ತನ್ನು ಸಮರ್ಪಕವಾಗಿ ಬಳಕೆ ಮಾಡುವಂಥಾದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಆ ಸಂದರ್ಭದಲ್ಲಿ ಯಾವ ರೀತಿ ಅಂತರರಾಜ್ಯ ವಿವಾದವಿದೆ, ಆ ರೀತಿ ಅಂತರಜಿಲ್ಲೆ ವಿವಾದ ಆಗಲಿಕ್ಕೆ ಅವಕಾಶ ಕೊಡದೆ, ಯಾವುದೇ sectorಗೆ confrontation ಆಗದಂತೆ ನಾವು ನೋಡಿಕೊಳ್ಳುತ್ತೇವೆ. ಸರ್ಕಾರ ಅದಕ್ಕೆ ಬದ್ಧವಾಗಿದೆ. ನಿಮ್ಮ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ನಾವು ಬದ್ಧರಾಗಿದ್ದೇವೆ ಎನ್ನುವುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದೀರಿ. ಈ ಬಗ್ಗೆ ಹೆಚ್ಚಿನ ಚರ್ಚೆ ಬೇಡ, ಇಷ್ಟು ಸಾಕು.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರರು ಬೆಳಿಗ್ಗೆ ನಿಯಮ 60ರ ಅಡಿಯಲ್ಲಿ ಕೊಟ್ಟಂತಹ ನಿಲುವಳಿ ಸೂಚನೆಯನ್ನು ನಿಯಮ 69ಕ್ಕೆ ಬದಲಾವಣೆ ಮಾಡಿ, ಇದನ್ನು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ನಮ್ಮ ನಿಯಮಾವಳಿ 70[2]ರ ಪ್ರಕಾರ ಈ ಚರ್ಚೆಗೆ ಒಂದು ಗಂಟೆ ಕಾಲಾವಧಿ ನಿಗದಿ ಮಾಡಿದ್ದೇನೆ. ಎಲ್ಲರೂ ಸಹಕರಿಸಿ. ಇರುವುದನ್ನು ಹೇಳಿದ್ದೇನೆ, ತಾವು ಚರ್ಚೆ ಪ್ರಾರಂಭ ಮಾಡಿ.